# ಉದಯವಾಣಿ

**Wednesday 08th February 2023, Page No.4**

**RVCE: In a workshop organized in the college, talented people who held high positions in private organizations were felicitated.**

# ಉದ್ಯಮಕ್ಕೆ ಪೂರಕ ಪಠ್ಯ ರಚನೆ



ಆರ್.ವಿ ಕಾಲೇಜಿನಲ್ಲಿ ಆಯೋಜಸಿದ್ದ ಕಾರ್ಯಾಗಾರದಲ್ಲಿ ಖಾಸಗಿ ಸಂಸ್ಥೆಯಲ್ಲಿ ಉನ್ನತ ಹುದ್ದೆ ಅಲಂಕರಿಸಿದ ಪ್ರತಿಭಾವಂತರನ್ನು ಅಭಿನಂದಿಸಲಾಯಿತು.

**ಕೆಂಗೇರಿ:** ಮುಂದಿನ ದಿನಗಳಲ್ಲಿ ಉದ್ಯಮಗಳು ಮತ್ತು ವಿದ್ಯಾರ್ಥಿಗಳ ಅಗತ್ಯತೆಗೆ ತಕ್ಕಂತೆ ಪಠ್ಯಕ್ರಮದಲ್ಲಿ ಪೂರಕವಾದ ಬದಲಾವಣೆ ತರುವ ಉದ್ದೇಶ ಹೊಂದಲಾಗಿದೆ ಎಂದು ವಿಟಿಯು ಕುಲಪತಿ ಪ್ರೊ.ಎಸ್.ವಿದ್ಯಾಶಂಕರ್ ತಿಳಿಸಿದರು.

ಮೈಸೂರು ರಸ್ತೆಯ ಆರ್.ವಿ ಕಾಲೇಜ್ ಆಫ್ ಎಂಜಿನಿಯರಿಂಗ್ ಸಭಾಂಗಣದಲ್ಲಿ ವಿಟಿಯು ಸಹಯೋಗದಲ್ಲಿ ಆಯೋಜಿಸಲಾಗಿದ್ದ 'ವಿಟಿಯು - ಟ್ರೈನಿಂಗ್ ಆ್ಯಂಡ್ ಪ್ಲೇಸ್ಮೆಂಟ್ ಆಫಿಸರ್ಸ್' ಒಂದು ದಿನದ ಕಾರ್ಯಾಗಾರದಲ್ಲಿ ಮಾತನಾಡಿದರು.

ಒಂದು ವಲಯದಲ್ಲಿ ವಿದ್ಯಾರ್ಥಿಗಳ ಕಡಿಮೆ ಸಂಖ್ಯೆ ದಾಖಲಾತಿಯಿದೆ ಎಂದು ಅದನ್ನು ಕೈಬಿಡಬಾರದು, ಪರಿಣತಿ ಹೊಂದಿರುವ ಪಠ್ಯಕ್ರಮದ ಜತೆ ಶಿಕ್ಷಕರು ಬೇರೆ ವಿಷಯದಲ್ಲಿ ತರಬೇತಿ ಪಡೆದರೆ ವಿದ್ಯಾರ್ಥಿಗಳು ಬಯಸುವ ಐಚ್ಛಿಕ ವಿಷಯ ಬೋಧಿಸಲು ಸುಲಭವಾಗಲಿದೆ. ಇದರಿಂದ ಶೈಕ್ಷಣಿಕ ಬದಲಾವಣೆ ಸಾಧ್ಯ ಎಂದರು.

ಟೊಯೋಟಾ ಇಂಡಸ್ಟ್ರೀಸ್ ನ ಟಿ.ಆರ್ .ಪರಶುರಾಮನ್ ಮಾತನಾಡಿ, ಸಾಮಾನ್ಯ ವಿದ್ಯಾರ್ಥಿಗಳನ್ನು ಅಸಾಮಾನ್ಯರನ್ನಾಗಿ ಪರಿವರ್ತನೆ ಮಾಡುವುದರ ಬಗ್ಗೆ ನಾವು ಹೆಚ್ಚು ಗಮನಿಸಬೇಕಿದೆ. ಯುವ ಜನಸಂಖ್ಯೆ ಅತೀ ಹೆಚ್ಚು ಹೊಂದಿರುವ ರಾಷ್ಟ್ರ ನಮ್ಮದು. ಈ ಅವಕಾಶ ನಾವು ಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳಬೇಕಿದೆ ಎಂದರು.

ಕಾರ್ಯಾಗಾರದಲ್ಲಿ ರಾಜ್ಯದ ಹಲವು ಜಿಲ್ಲೆಯಿಂದ ವಿವಿಧ ಕಾಲೇಜುಗಳ 150ಕ್ಕೂ ಹೆಚ್ಚು ಪ್ಲೇಸ್ಮೆಂಟ್ ಆಫಿಸರ್ಸ್‌ಗಳು ಪಾಲ್ಗೊಂಡಿದ್ದರು. ಆರ್.ವಿಸಿಇ ಪ್ರಾಂಶುಪಾಲ ಡಾ. ಕೆ.ಎನ್.ಸುಬ್ರಹ್ಮಣ್ಯ, ಜಂಟಿ ಕಾರ್ಯದರ್ಶಿ ಡಿ.ಪಿ.ನಾಗರಾಜ್, ಡಾ.ಕೆ.ಎಸ್. ಗೀತಾ ಇತರರಿದ್ದರು.